

ಸಾಯಂಕಾಲ ಚಹದ ಜೊತೆ ತಿನ್ನಲೆಂದು ಹಲಸಿನ ಹಣ್ಣಿನ ಮುಳಕ ಮಾಡಿದರು. ಮಗ ಚಪ್ಪರಿಸಿಕೊಂಡು ಸವಿದಾಗ, ತಾಯಿಗೆ ಸಂತೃಪ್ತಿ.

ಮರುದಿನ ಭಾನುವಾರ. ಬೆಳಗ್ಗಿಂದ ಸುಶೀಲ ಅಡುಗೆ ತಿಂಡಿಗಳ ತಯಾರಿಯಲ್ಲಿ ನಿರತರಾಗಿದ್ದರು. ಎಲ್ಲಾ ಕೆಲಸ ಮುಗಿಸಿ ಮಧ್ಯಾಹ್ನದ ಊಟವೂ ಆದ ಮೇಲೆ ಸ್ವಲ್ಪ ಹೊತ್ತು ವಿರಮಿಸಲೆಂದು ಕೋಣೆ ಸೇರಿದ ಸುಶೀಲ ಮೊಬೈಲು ತೆರೆದು ಕಣ್ಣು ಹಾಯಿಸಿದರು. ಸಾಲಾಗಿ ಸಂದೇಶಗಳು! ಏನು ವಿಶೇಷ ಎಂದು ನೋಡಿದರೆ ಗೊತ್ತಾಯಿತು, ಇವತ್ತು ಮದರ್ಸ್ ಡೇ! ಇವತ್ತೇ ನಮ್ಮ ಮಗ ಬಂದಿದ್ದಾನಲ್ಲ, ಎಂಥ ಕಾಕತಾಳೀಯ! ರೋಮಾಂಚಿತರಾದರು ಸುಶೀಲ. ಆದರೆ... ಮಗ ನನಗೆ ವಿಶ್ ಮಾಡಲಿಲ್ಲ. ಪಾಪ, ಸಮಯದ ಪರಿವೆಯೇ ಇಲ್ಲದೆ ಕೆಲಸದಲ್ಲಿ ಮುಳುಗಿರುತ್ತಾನೆ. ಇಂತಹ ಸಣ್ಣಪುಟ್ಟ ವಿಷಯಗಳು ಹೇಗೆ ನೆನಪಾಗಬೇಕು. ಬಹುಶಃ ಸೊಸೆ ಬಂದಿದ್ದರೆ ಜ್ಞಾಪಿಸುತ್ತಿದ್ದಳೋ ಏನೋ! ಇರಲಿ, ಪರವಾಗಿಲ್ಲ.

ಕಿರುನಿದ್ದೆಯ ನಂತರ ಎದ್ದು ಬಂದ ಸುಶೀಲ ಮರುದಿನ ಹೊರಡಲಿರುವ ಮಗನ ಜತೆ ಕಳುಹಿಸಿಕೊಡಲೆಂದು ಹಲಸಿನಕಾಯಿ ಹಪ್ಪಳ, ಮಾವಿನಹಣ್ಣಿನ ಮಾಂಬಳ, ಮಿಡಿ ಉಪ್ಪಿನಕಾಯಿ, ಬಾಳೆಕಾಯಿ ಚಿಪ್ಸ್ ಎಲ್ಲವನ್ನೂ ಪ್ಯಾಕ್ ಮಾಡಿ ಇಟ್ಟರು. ರಾತ್ರೆಯ ಊಟವಾದೊಡನೆ ಮಗನ ಕೋಣೆಯಲ್ಲಿ ಸೂಟ್ಕೇಸ್ ಬಳಿ ಅವನ್ನೆಲ್ಲ ತಂದಿಟ್ಟರು. ಕೋಣೆಯ ಹೊರಗಿನ ಬಾಲ್ಕನಿಯಲ್ಲಿ ಮಗ ದೂರವಾಣಿ ಕರೆಯಲ್ಲಿ ನಿರತನಾಗಿದ್ದ. ಅವನು ಮಾತಾಡುತ್ತಿದ್ದುದು ಲಂಡನ್ನಿನಲ್ಲಿರುವ ತನ್ನ ಮಕ್ಕಳೊಡನೆ. ಕೇಳಿಸಿಕೊಳ್ಳುವ ಉದ್ದೇಶವಿಲ್ಲದಿದ್ದರೂ ಸುಶೀಲರ ಕಿವಿಗೆ ಅವನ ಮಾತುಗಳು ಬಿದ್ದವು.

'ಮಕ್ಕಳೇ ನಿಮ್ಮ ಅಮ್ಮನಿಗೆ ವಿಶ್ ಮಾಡಿದಿರಾ?'

'.................................'

'ವಾವ್! ಗಿಫ್ಟ್ ಕೂಡಾ ಕೊಟ್ಟಿದ್ದೀರಾ? ವೆರಿ ಗುಡ್...'

ಅಂದರೆ.... ಇವತ್ತು ಮದರ್ಸ್ ಡೇ ಅಂತ ತೇಜೂಗೆ ನೆನಪಿದೆ. ಈ ದಿನದ ಪ್ರಾಮುಖ್ಯತೆಯ ಅರಿವಿದೆ. ಮಕ್ಕಳಿಗೆ ಫೋನ್ ಮಾಡಿ ವಿಚಾರಿಸಿದ.... ಆದರೆ ಅವನ ಅಮ್ಮ ಇಲ್ಲಿ ಕಣ್ಣ ಮುಂದೆಯೇ ಇರುವಾಗ ಒಂದು ಶುಭಾಶಯ ಹೇಳುವಷ್ಟು ಪರಿಜ್ಞಾನ ಅವನಿಗಿಲ್ಲ.... ಗಿಫ್ಟ್ ಬೇಡ, ವಿಶ್ ಮಾಡಬಹುದಾಗಿತ್ತಲ್ಲ.... ಸುಶೀಲರಿಗೆ ಪಿಚ್ಚೆನಿಸಿತು. ಮನಸ್ಸು ಮುದುಡಿತು.

ಮರುದಿನ ಪ್ರಾತಃಕಾಲವೇ ತೇಜಸ್ ಹೊರಟ. ಮನೆ ಭಣ ಭಣ ಎನಿಸತೊಡಗಿತು. ಎರಡು ದಿನ ಮಗನೊಡನೆ ಹರಟೆ ಹೊಡೆದಿದ್ದ ಸೋಮೇಶ, ಇಂದು ಎಂದಿನಂತೆ ದಿನಪತ್ರಿಕೆಯಲ್ಲಿ ಮುಖ ಹುದುಗಿಸಿದರು. ಸಾಯಂಕಾಲ ಸುಶೀಲರಿಗೆ ಪಕ್ಕದ ಮನೆಯ ಪಂಕಜ ಮಾತಾಡಲು ಸಿಕ್ಕಿದರು.

'ಮಗ ಹೊರಟು ಹೋದ್ನಾ? ಅವನು ಒಳ್ಳೆಯ ದಿನವೇ ಬಂದ ಹಾಗಾಯಿತು. ನಿನ್ನೆ ಮದರ್ಸ್ ಡೇ ಅಲ್ಲವೇ? ಏನು ಗಿಫ್ಟ್ ಕೊಟ್ಟ ನಿಮ್ಗೆ?'

ಏನು ಹೇಳಬೇಕೆಂದು ತೋಚದ ಸುಶೀಲ ಮನೆಯೊಳಗಿದ್ದ ಕರ್ಣಾಭರಣ ಒಂದನ್ನು ತಂದು ತೋರಿಸಿ 'ನೋಡಿ, ಇದು ಮಗ ತಂದಿರೋದು' ಎಂದು ಹೇಳಿ ನುಣುಚಿಕೊಂಡರು.